# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 32 ಗ್ರಾಪಂಸಿ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15-11-2014

**ಇವರಿಂದ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

**ಇವರಿಗೆ:**
ಎಲ್ಲಾ ಜಿಲ್ಲಾ ಪಂಚಾಯತಿಯ
ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು,

ಮಾನ್ಯರೆ,

ವಿಷಯ: ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/22/ಗ್ರಾ.ಪಂ.ಸಿ/2014, ದಿನಾಂಕ: 10.09.2014.
2. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014 ದಿನಾಂಕ:20-09-2014
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ ಶಿವಮೊಗ್ಗ ರವರ ಪತ್ರ ಸಂಖ್ಯೆ: ಜಿಪಂಶಿ/ಅಭಿ(1)/ವಿವ-51/2014-15 ದಿನಾಂಕ: 03-11-2014
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತಿ ಕೊಪ್ಪಳ ರವರ ಪತ್ರ ಸಂಖ್ಯೆ: ಜಿಪಂಕೊ/ಸಿಬ್ಬಂದಿ-1/ಸಿಆರ್-61/2013-14 ದಿನಾಂಕ: 11-11-2014
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಬೆಂಗಳೂರು ಗ್ರಾಮಾಂತರ ರವರ ಪತ್ರ ಸಂಖ್ಯೆ:ಬೆಂಗ್ರಾಜಿಪಂ/ಸಿಆರ್. /2014-15 ದಿ: 25-10-2014
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಮಂಡ್ಯ ರವರ ಪತ್ರ ಸಂಖ್ಯೆ: ಉಕಾ2/ಡಿ7/ಸಿಆರ್05/10-11 ದಿನಾಂಕ:18-10-2014

ಉಲ್ಲೇಖ (1) ಮತ್ತು (2) ರ ಸರ್ಕಾರದ ಆದೇಶ ಮತ್ತು ತಿದ್ದೋಲೆಗಳಲ್ಲಿ ಗ್ರಾಮ ಪಂಚಾಯಿತಿಗಳ ಸಿಬ್ಬಂದಿ ವರ್ಗದ ಮಾದರಿ (ಸ್ಟ್ಯಾಫಿಂಗ್ ಪ್ಯಾಟ್ರನ್) ಹಾಗೂ ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಸವಿವರವಾಗಿ ತಿಳಿಸಿದೆ. ಆದಾಗ್ಯೂ ಕೆಲವು ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮ ಪಂಚಾಯತಿ ಸಿಬ್ಬಂದಿಗಳ ನೇಮಕಾತಿ ಮತ್ತು ಅನುಮೋದನೆ ನೀಡುವ ಬಗ್ಗೆ ಈ ಕೆಳಕಂಡ ಅಂಶಗಳ ಬಗ್ಗೆ ಸ್ಪಷ್ಟೀಕರಣವನ್ನು ಕೋರಿರುತ್ತಾರೆ.

ಆದುದರಿಂದ ಈ ಕೆಳಕಂಡಂತೆ ತಮಗೆ ಸ್ಪಷ್ಟೀಕರಣ ನೀಡಲು ನಾನು ನಿರ್ದೇಶಿಸಲ್ಪಟ್ಟಿದ್ದೇನೆ.

| ಕ್ರ ಸಂ | ವಿಷಯ | ಸ್ಪಷ್ಟೀಕರಣ |
|---|---|---|
| 01 | ಕರವಸೂಲಿಗಾರ/ಗುಮಾಸ್ತ/ಡಾಟ ಎಂಟ್ರಿ ಆಪರೇಟರ್ ಇವರಿಗೆ ಪಿಯುಸಿಯಲ್ಲಿ ತೇರ್ಗಡೆ ಮತ್ತು ಕಂಪ್ಯೂಟರ್ ಆಪ್ಲಿಕೇಶನ್‌ನಲ್ಲಿ ಪರಿಣಿತಿ ಹೊಂದಿದ್ದು ಕಂಪ್ಯೊಟರ್ ಆಪ್ಲೀಕೇಶನ್ ಕೋರ್ಸನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ 06 ತಿಂಗಳ ತರಬೇತಿ ಪಡೆದಿರಬೇಕು ಹಾಗೂ ಪ್ರಮಾಣ ಪತ್ರ ಹೊಂದಿರಬೇಕು ಎಂದು ಇರುತ್ತದೆ.<br>1) ಗ್ರಾಮ ಪಂಚಾಯತಿಗಳು ಕರವಸೂಲಿಗಾರರನ್ನು ನೇಮಕಾತಿ ಮಾಡಿಕೊಳ್ಳುವ ಸಂದರ್ಭದಲ್ಲಿ ದ್ವಿತೀಯ ದರ್ಜೆ ಹುದ್ದೆಗೆ ಸಮಾನಾಂತರವಾಗಿ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾದವರನ್ನು ತೆಗೆದುಕೊಂಡಿದ್ದು, ಸರ್ಕಾರ ಈಗ ನಿಗದಿಪಡಿಸಿರುವ ಪಿ.ಯು.ಸಿ. | ಸರ್ಕಾರವು ದಿನಾಂಕ:10-01-1994 ಮತ್ತು 04-01-2008 ರ ಸರ್ಕಾರದ ಆದೇಶ ಮತ್ತು ಅಧಿಕೃತ ಜ್ಞಾಪನದಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದ ಬಗ್ಗೆ ವಿವರಿಸಲಾಗಿದ್ದು, ಆಗ ನಿಗದಿಪಡಿಸಿರುವ ವಿದ್ಯಾರ್ಹತೆ ಅನುಗುಣವಾಗಿ ಗ್ರಾಮ ಪಂಚಾಯತಿಯು ನೌಕರರನ್ನು ನೇಮಕ ಮಾಡಿಕೊಳ್ಳಬೇಕಾಗಿರುತ್ತದೆ. |

| | | |
|---|---|---|
| | ವಿದ್ಯಾರ್ಹತೆ ಹಾಗೂ ಕಂಪ್ಯೂಟರ್ ಪ್ರಮಾಣ ಪತ್ರಗಳು ಇರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ನೇಮಕಾತಿ ಸಂದರ್ಭದಲ್ಲಿ ಇದ್ದ ವಿದ್ಯಾರ್ಹತೆಯನ್ನು ಪರಿಗಣಿಸಬಹುದೇ ?<br>2) ಸರ್ಕಾರಿ ಇತ್ತೀಚಿನ ಆದೇಶದಂತೆ ಕರವಸೂಲಿಗಾರರಿಗೆ ಪಿ.ಯು.ಸಿ ಮತ್ತು ಕಂಪ್ಯೂಟರ್ ಪರಿಣಿತಿ ಅಗತ್ಯ ಎಂದು ತಿಳಿಸಿದ್ದು, ಕಂಪ್ಯೂಟರ್ ಪ್ರಮಾಣ ಪತ್ರ ಪಡೆದುಕೊಳ್ಳಬೇಕೆ ಅಥವಾ ಕಂಪ್ಯೂಟರ್ ಪರಿಣಿತಿ ಜ್ಞಾನದ ಬಗ್ಗೆ ಯಾವ ಮಾನದಂಡ ಅನುಸರಿಸಬೇಕು ಎಂಬ ಬಗ್ಗೆ<br>3) ರಾಜ್ಯ ಸರ್ಕಾರ ಅನುಮೋದಿಸಿರುವ ಸಂಸ್ಥೆಗಳಲ್ಲಿ ಕಿಯೋನಿಕ್ಸ್ ಸೇರಿದಂತೆ ಸ್ಥಳೀಯವಾಗಿ ಕಂಪ್ಯೂಟರ್ ತರಬೇತಿ ನೀಡುತ್ತಿರುವ ಸಂಸ್ಥೆಗಳನ್ನು ಸರ್ಕಾರ ಮಾನ್ಯತೆ ಪಟ್ಟಿಯಲ್ಲಿ ಸೇರಿಸದೇ ಇರುವುದರಿಂದ ಅಂತಹ ತರಬೇತಿ ಸಂಸ್ಥೆಗಳಿಂದ ಪಡೆದುಕೊಂಡು ಹಾಜರುಪಡಿಸಿರುವ ತರಬೇತಿ ಪ್ರಮಾಣ ಪತ್ರಗಳನ್ನು ಒಪ್ಪಿಕೊಂಡು ಅನುಮೋದನೆ ನೀಡಬಹುದೇ ?<br>4) ಕಿಯೋನಿಕ್ಸ್ ತರಬೇತಿ ಸಂಸ್ಥೆಯೂ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಪ್ರಮಾಣ ಪತ್ರಗಳ ನೈಜ್ಯತೆಯನ್ನು ಯಾವ ರೀತಿಯಲ್ಲಿ ಪರಿಶೀಲಿಸಿ ಅವುಗಳನ್ನು ಒಪ್ಪಿಕೊಳ್ಳಬೇಕು ಕೆಲವೊಂದು ಪ್ರಕರಣಗಳಲ್ಲಿ ಸ್ಥಳೀಯ ಕಂಪ್ಯೂಟರ್ ತರಬೇತಿ ಸಂಸ್ಥೆಗಳು ತರಬೇತಿ ನೀಡದೇ ಪ್ರಮಾಣ ಪತ್ರಗಳನ್ನು ವಿತರಿಸುವ ಸಂಭವವಿರುವ್ಯದರಿಂದ ಅಂತಹ ಸಂಸ್ಥೆಗಳು ನೀಡುವ ತರಬೇತಿ ಗುಣಮಟ್ಟದ ಬಗ್ಗೆ ಹೇಗೆ ಖಾತರಿಪಡಿಸಿಕೊಳ್ಳಬೇಕು ? ಹಾಗೂ ಅವುಗಳನ್ನು ಒಪ್ಪಿಕೊಂಡಲ್ಲಿ ಅವುಗಳ ನೈಜ್ಯತೆಯನ್ನು ಯಾವ ರೀತಿ ಪರಿಶೀಲಿಸಿಕೊಳ್ಳಬೇಕು. ಉದಾ: ಈ ಪತ್ರದೊಂದಿಗೆ ಲಗತ್ತಿಸಿರುವ ಪುಟ್ಟಪ್ಪ,2/07/2010 ರಿಂದ 01/01/2011, ರಾಜೇಶ್.ಎಸ್, 12/04/2010 ರಿಂದ 11/10/2010, ಸುರೇಶ್.ಆರ್.ಸಿ. 02/12/2012ರಿಂದ 01/06/2013, ಸುರೇಶ.ಹೆಚ್.ಸಿ 14-06-2010 ರಿಂದ 13/12/2010, ನಾಗೇಶ್.ಎಸ್.ಮೋರೆ 10/07/2013 ರಿಂದ 09/01/2014 ಇವರುಗಳು ವಿವಿಧ ವರ್ಷಗಳಲ್ಲಿ ತರಬೇತಿ ಪಡೆದಿರುವಂತೆ ಪ್ರಮಾಣ ಪತ್ರ ಹಾಜರುಪಡಿಸಿದ್ದು, ಈ ಎಲ್ಲಾ 5 ಅಭ್ಯರ್ಥಿಗಳ ದೃಢೀಕರಣ ಪತ್ರಗಳನ್ನು ದಿನಾಂಕ:31/07/2014ರಂದು ನೀಡಿರುವುದಾಗಿ ಪ್ರಮಾಣ ಪತ್ರದಲ್ಲಿ ನಮೂದಿಸಲಾಗಿದೆ. ಇಂತಹ ದೃಢೀಕರಣ ಪತ್ರಗಳ ನೈಜ್ಯತೆಯ ಬಗ್ಗೆ ಅನುಮಾನ ಉಂಟಾಗುತ್ತದೆ. (ಯಾವುದೇ ದೃಢೀಕರಣ ಪತ್ರವನ್ನು ತರಬೇತಿ ಮುಗಿದ 15 ದಿವಸದೊಳಗಾಗಿ ನೀಡಲಾಗುತ್ತದೆ.) ಕಿಯೋನಿಕ್ಸ್‌ನಿಂದ 2010 ರಿಂದ 2014ರ ಅವಧಿಯಲ್ಲಿ ತರಬೇತಿ ಪಡೆದಿರುವುದಾಗಿ ದೃಢೀಕರಣಗಳನ್ನು ಹಾಜರುಪಡಿಸಿದ್ದು. ಇಂತಹ ಪ್ರಮಾಣ ಪತ್ರಗಳ ನೈಜ್ಯತೆಯನ್ನು ಯಾವ ರೀತಿ ಪರಿಶೀಲಿಸಿಕೊಳ್ಳಬೇಕು. | ಪ್ರಸ್ತುತ ಸರ್ಕಾರವು ದಿನಾಂಕ: 10-09-2014 ರಂದು ಹೊರಡಿಸಿರುವ ಆದೇಶವು ಭವಿಷ್ಯಾನ್ವಯವಾಗಿದ್ದು, ಈ ಹಿಂದಿನ ಆದೇಶ / ಅಧಿಕೃತ ಜ್ಞಾಪನಗಳನ್ವಯ ನೇಮಕಗೊಂಡಿರುವ ಸಿಬ್ಬಂದಿ ವರ್ಗದವರಿಗೆ ಈಗ ನಿಗಧಿಗೊಳಿಸಿರುವ ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br><br>ಆಯಾಯ ಆದೇಶಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಆ ಸಂದರ್ಭದಲ್ಲಿ ನೇಮಿಸಿಕೊಂಡ ನೌಕರರಿಗೆ ಮಾತ್ರ ಅನ್ವಯಿಸುತ್ತದೆ.<br><br>ಕಂಪ್ಯೂಟರ್ ಅಪ್ಲಿಕೇಶನ್‌ಲ್ಲಿ ಪರಿಣಿತಿ ಹೊಂದಿದ್ದು ಕಂಪ್ಯೂಟರ್ ಅಪ್ಲಿಕೇಷನ್ ಕೋರ್ಸ್‌ನಲ್ಲಿ ಕೇಂದ್ರ ಅಥವ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಯಿಂದ 6 ತಿಂಗಳ ತರಬೇತಿ ಪಡೆದಿರುವ ಬಗ್ಗೆ ಹಾಗೂ ಪ್ರಮಾಣ ಪತ್ರ ಹೊಂದಿರುವುದರ ಬಗ್ಗೆ ಸಂಬಂಧಪಟ್ಟ ಸಂಸ್ಥೆಗಳಿಂದ ನೈಜತೆಯನ್ನು ಪರಿಶೀಲಿಸಿಕೊಳ್ಳಬಹುದಾಗಿದೆ. |
| 02 | ಸರ್ಕಾರಿ ಆದೇಶದಂತೆ ಗ್ರಾಮ ಪಂಚಾಯತಿಯಲ್ಲಿ ಒಂದಕ್ಕಿಂತ ಹೆಚ್ಚು ಹುದ್ದೆಗಳು ಸೃಜನೆಯಾದಲ್ಲಿ ಇಂತಹ ಹುದ್ದೆಗಳಿಗೆ ಮೀಸಲಾತಿ ಅಳವಡಿಸಿ ಭರ್ತಿ ಮಾಡಲು ಅನುಮೋದನೆ ನೀಡುವಂತೆ ತಿಳಿಸಲಾಗಿದೆ.<br><br>ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ನಳ ನೀರು ಸರಬರಾಜು ಯೋಜನೆಗಳು ಸೇರಿದಂತೆ ಪ್ರತೀ ಕಿರುನೀರು ಸರಬರಾಜಿಗೆ ಒಬ್ಬರಂತೆ ಈಗಾಗಲೇ ನೀರುಗಂಟಿಗಳನ್ನು ನೇಮಕಾತಿ ಮಾಡಿಕೊಂಡಿದ್ದು, ಹಲವು ಗ್ರಾಮ ಪಂಚಾಯತಿಗಳಲ್ಲಿ ಒಂದಕ್ಕಿಂತ ಹೆಚ್ಚು ನಳನೀರು ಸರಬರಾಜು ಘಟಕಗಳು ಇರುವುದರಿಂದ ನೀರುಗಂಟಿ ಹುದ್ದೆಯನ್ನು ಅನುಮೋದಿಸುವಾಗ ಮೀಸಲಾತಿ ಅಳವಡಿಸುವಾಗ ಈ ಕೆಳಕಂಡ ತೊಡಕುಗಳು ಕಂಡುಬಂದಿರುತ್ತವೆ.<br><br>1) 3 ನಳನೀರು, 2 ಕಿರುನೀರು ಇರುವ ಕಡೆ ಪ್ರಸ್ತುತ 5 ನೀರುಗಂಟಿಗಳು ಕೆಲಸನಿರ್ವಹಿಸುತ್ತಿದ್ದು, ಅವರುಗಳಲ್ಲಿ ಸರ್ಕಾರದ ಆದೇಶದಂತೆ 3 ನೀರುಗಂಟಿಗಳನ್ನು ಮಾತ್ರ ಭರ್ತಿ ಮಾಡಲು ಅವಕಾಶವಿದ್ದು, ಉಳಿದ ಇಬ್ಬರನ್ನು ಕರ್ತವ್ಯದಿಂದ ಬಿಡುಗಡೆ ಮಾಡಬೇಕೆ ಅಥವಾ ಮುಂದುವರಿಸಬೇಕೆ.<br><br>2) ಬಹುತೇಕ ನೀರುಗಂಟಿಗಳು ಅವಿಧ್ಯಾವಂತರು ಹಾಗೂ ಕೇವಲ 7ನೇ ತರಗತಿವರೆಗೆ ವಿಧ್ಯಾಭ್ಯಾಸ ಹೊಂದಿದವರಾಗಿದ್ದು, ಅವರುಗಳನ್ನು ಕರ್ತವ್ಯದಲ್ಲಿ ಮುಂದುವರೆಸಬೇಕೆ ಅಥವಾ ಕರ್ತವ್ಯದಿಂದ ಬಿಡುಗಡೆಗೊಳಿಸಿ ಎಸ್ ಎಸ್.ಎಲ್.ಸಿ. ವಿದ್ಯಾರ್ಹತೆ ಇರುವವರನ್ನು ಪತ್ರಿಕಾ ಪ್ರಕಟಣೆ ಮೂಲಕ ನೇಮಕಾತಿ ಮಾಡಿಕೊಳ್ಳಬೇಕೆ ಅಥವಾ ಇರುವವರನ್ನೇ | ಗ್ರಾಮ ಪಂಚಾಯತಿಗಳು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113 ಕ್ಕೆ ಒಳಪಟ್ಟು ಅಗತ್ಯವಿರುವ ಸಿಬ್ಬಂದಿಗಳನ್ನು ನೇಮಕಾತಿ ಮಾಡಲು ಅವಕಾಶವಿರುತ್ತದೆ. ಗ್ರಾಮ ಪಂಚಾಯತಿಯ ಸಿಬ್ಬಂದಿ ವಾರ್ಷಿಕ ವೆಚ್ಚ ಶೇಕಡಾ 40 ನ್ನು ಮೀರಬಾರದು. ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 4.01.2008ರಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳ ನೀರಿನ ಸ್ಥಾವರಗಳನ್ನು ಹೊಂದಿದ್ದರೆ ಅಗತ್ಯಕ್ಕೆ ತಕ್ಕಂತೆ ವಾಟರ್‌ಮನ್‌ಗಳನ್ನು ನೇಮಿಸಿಕೊಳ್ಳಲು ಅವಕಾಶವಿರುತ್ತದೆ (ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಗ್ರಾಪಂಸಿ 2014ರ ಕಂಡಿಕೆ 10).<br><br>ಗ್ರಾಮ ಪಂಚಾಯತಿಯ ಸಿಬ್ಬಂದಿ ವೆಚ್ಚ ಶೇ 40% ರಷ್ಟುನ್ನು ಮೀರುವುದಾದರೆ ಅಂತಹ ನೇಮಕಾತಿಗಳನ್ನು ತಿರಸ್ಕರಿಸಬೇಕಾಗಿದೆ.<br><br>ಪ್ರಸ್ತುತ ಸರ್ಕಾರವು ದಿನಾಂಕ: 10-09-2014 ರಂದು ಹೊರಡಿಸಿರುವ ಆದೇಶವು ಭವಿಷ್ಯಾನ್ವಯವಾಗಿದ್ದು, ಈ ಹಿಂದಿನ ಆದೇಶ / ಅಧಿಕೃತ ಜ್ಞಾಪನಗಳನ್ವಯ ನೇಮಕಗೊಂಡಿರುವ ಸಿಬ್ಬಂದಿ ವರ್ಗದವರಿಗೆ ಈಗ |

| | | |
|---|---|---|
| | | ಇದ್ದಲ್ಲಿ ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ನಿರ್ಣಯದ ಮೇರೆಗೆ ನೇಮಿಸಿಕೊಳ್ಳಬಹುದಾಗಿದೆ. (ಸರ್ಕಾರದ ಆದೇಶ ದಿನಾಂಕ:10-09-2014 ರಂತೆ) |
| 04 | ಸರ್ಕಾರದ ದಿನಾಂಕ: 04-01-2008ರ ಆದೇಶದಲ್ಲಿ ಕರವಸೂಲಿಗಾರ / ಕ್ಲರ್ಕ್‌ಗಳಿಗೆ ನಿಗಧಿಪಡಿಸಿರುವ ಪದವೀಧರ ವಿದ್ಯಾರ್ಹತೆಯನ್ನು ಪಿ.ಯು.ಸಿ.ಎಂದು ಪರಿಗಣಿಸಲು ಅವಕಾಶ ಕಲ್ಪಿಸಿ ಪೂರ್ವಾನ್ವಯಗೊಳಿಸುವ ಬಗ್ಗೆ. | ಕರವಸೂಲಿಗಾರ /ಕ್ಲರ್ಕ್‌ಗಳಿಗೆ ಪಿ.ಯು.ಸಿ. ವಿದ್ಯಾರ್ಹತೆಯನ್ನು ದಿನಾಂಕ:04-01-2008 ರಿಂದ ಪೂರ್ವಾನ್ವಯಗೊಳಿಸಿ, ಪರಿಗಣಿಸಲು ಅವಕಾಶವಿರುವುದಿಲ್ಲ. |
| 05 | ಕೊಳವೆ ನೀರು ಸರಬರಾಜು ವ್ಯವಸ್ಥೆಗೆ ವಾಟರ್‌ಮನ್ / ಪಂಪ್ ಆಪರೇಟರ್ / ಮೆಕ್ಯಾನಿಕ್ ವಾಲ್ವ್‌ಮನ್ ನೇಮಕಾತಿ ಮಾಡಿಕೊಂಡಿರುವ ಕ್ರಮವನ್ನು ಅನುಮೋದಿಸುವ ಬಗ್ಗೆ. | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 4.01.2008ರಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳ ನೀರಿನ ಸ್ಥಾವರಗಳನ್ನು ಹೊಂದಿದ್ದರೆ ಅಗತ್ಯಕ್ಕೆ ತಕ್ಕಂತೆ ವಾಟರ್‌ಮನ್‌ಗಳನ್ನು ನೇಮಿಸಿಕೊಳ್ಳಲು ಅವಕಾಶವಿರುತ್ತದೆ (ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಗ್ರಾಪಂಸಿ 2014ರ ಕಂಡಿಕೆ 10). |
| 06 | ಕೆಲವು ಗ್ರಾಮ ಪಂಚಾಯತಿಗಳಲ್ಲಿ ಕಾರ್ಯಒತ್ತಡದಿಂದ ಒಂದಕ್ಕಿಂತ ಹೆಚ್ಚಿನ ಸಂಖ್ಯೆ ಬಿಲ್ ಕಲೆಕ್ಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರಸ್ತುತ ದಿನಾಂಕ:10-09-2014ರಂತೆ ಒಂದು ಹುದ್ದೆಗೆ ಮಾತ್ರ ಅನುಮೋದನೆ ನೀಡಲು ಅವಕಾಶವಿರುವುದರಿಂದ ಸೇವೆಯಲ್ಲಿ ಹಿರಿಯರಾದ ನೌಕರರ ನೇಮಕಾತಿಗೆ ಮಾತ್ರ ಅನುಮೋದನೆ ನೀಡಲು ಕ್ರಮ ವಹಿಸುತ್ತಿದ್ದು, ಬಿಲ್ ಕಲೆಕ್ಟರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಉಳಿಕೆ ನೌಕರರ ಅನುಮೋದನೆಗೆ ಪ್ರಸ್ತಾವನೆಗಳು ಸ್ವೀಕೃತವಾಗ ುತ್ತಿರುವುದರಿಂದ ಸದರಿ ನೌಕರರನ್ನು ಅನುಮೋದನೆ ನೀಡುವ ಬಗ್ಗೆ ಅಥವಾ ಅನುಮೋದನೆ ನೀಡದೆ ಯಥಾಸ್ಥಿತಿಯಲ್ಲಿ ಮುಂದುವರೆಸುವ ಬಗ್ಗೆ . | ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ನಿಗದಿಪಡಿಸಿರುವ ಹುದ್ದೆಗಳಿಗನುಗುಣವಾಗಿ ಮತ್ತು ಆದೇಶಗಳಲ್ಲಿನ ಷರತ್ತುಗಳಿಗನುಗುಣವಾಗಿ ಗ್ರಾಮ ಪಂಚಾಯಿತಿಗಳು ನೇಮಕಾತಿ ಮಾಡಿಕೊಳ್ಳಬೇಕಾಗುತ್ತದೆ.<br><br>ಗ್ರಾಮ ಪಂಚಾಯತಿಯ ಸಿಬ್ಬಂದಿ ವೆಚ್ಚ ಶೇ 40% ರಷ್ಟನ್ನು ಮೀರುವುದಾದರೆ ಅಂತಹ ನೇಮಕಾತಿಗಳನ್ನು ತಿರಸ್ಕರಿಸಬೇಕಾಗಿದೆ. |
| 07 | ಕೆಲವು ಗ್ರಾಮ ಪಂಚಾಯತಿಗಳಲ್ಲಿ ಪ್ರಸ್ತುತ ಕ್ಲರ್ಕ್-ಕಂ-ಬೆರಳಚ್ಚುಗಾರ ಹುದ್ದೆಯಲ್ಲಿ ನೌಕರರು ಕಾರ್ಯ ನಿರ್ವಹಿಸುತ್ತಿದ್ದು, ಪ್ಯಾರಾ 6ರಲ್ಲಿ ತಿಳಿಸಿರುವಂತೆ ಸದರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಸೇವೆಯಿಂದ ಮುಕ್ತವಾಗುವವರೆಗೆ ಮುಂದುವರೆಸಿದ್ದು, ಹಾಲಿ ಸದರಿ ಗ ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಅಪರೇಟರ್ ನೇಮಕಾತಿಯನ್ನು ಅನುಮೋದಿಸುವ ಬಗ್ಗೆ ಅಥವಾ ಸೇವೆಯನ್ನು ಮುಂದುವರೆಸುವ ಬಗ್ಗೆ | ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಹುದ್ದೆ ಮಂಜೂರಾಗಿರುವುದಿಲ್ಲ. ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದ ದಿನಾಂಕ: 10-01-1994 ರ ಆದೇಶದಲ್ಲಿ ಕ್ಲರ್ಕ್ / ಅಕೌಂಟೆಂಟ್ ಕಂ ಬೆರಳಚ್ಚುಗಾರ ಹುದ್ದೆ ಮತ್ತು 04-01-2008 ರ ಅಧಿಕೃತ ಜ್ಞಾಪನದಲ್ಲಿ ಕ್ಲರ್ಕ್ ಹುದ್ದೆ ಮಂಜೂರಾಗಿರುತ್ತದೆ. ದಿನಾಂಕ:10-09-2014 ರ ಆದೇಶದಲ್ಲಿ ಕ್ಲರ್ಕ್ ಹುದ್ದೆಯನ್ನು ಕ್ಲಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯೆಂದು ಮರು ಪದನಾಮಕರಣ ಮಾಡಲಾಗಿದೆ. ಈ ಹುದ್ದೆಯು ಭವಿಷ್ಯಾನ್ವಯವಾಗಿ ಜಾರಿಗೆ ಬಂದಿರುತ್ತದೆ.<br><br>ಆದಾಗ್ಯೂ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಎಂದು ಗ್ರಾಮ ಪಂಚಾಯತಿಗಳು ನೇಮಕಮಾಡಿಕೊಂಡಿದ್ದರೆ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಅನುಮೋದನೆ ನೀಡುವ ಬದಲು ಸದರಿ ಆದೇಶಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯ ಅನುಸಾರ ಕ್ಲರ್ಕ್ ಹುದ್ದೆಗೆ ನೇಮಕಗೊಂಡಿದ್ದರೆ ಕಂಪ್ಯೂಟರ್ ಆಪರೇಟರ್ ಎಂಬುವುದನ್ನು ಹೊರತುಪಡಿಸಿ, ಕ್ಲರ್ಕ್ ಹುದ್ದೆಗೆ ನೇಮಕಾತಿ ಮಾಡಿಕೊಂಡಿರುವುದಕ್ಕೆ ಅನುಮೋದನೆ ನೀಡಬಹುದಾಗಿರುತ್ತದೆ.<br><br>ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ಕಂಪ್ಯೂಟರ್ ಆಪರೇಟರ್ ಹುದ್ದೆ ಮಂಜೂರಾಗದೆ ದಿನಾಂಕ:10-09-2014 ರ ಪೂರ್ವದಲ್ಲಿ ಗ್ರಾಮ ಪಂಚಾಯತಿಗಳು ಡಾಟಾ ಎಂಟ್ರಿ ಆಪರೇಟರ್ / ಕಂಪ್ಯೂಟರ್ ಆಪರೇಟರ್ ಹುದ್ದೆಗೆ ನಿರ್ಣಯದ ಮೂಲಕ ನೇಮಕಾತಿ ಮಾಡಿಕೊಂಡಿದ್ದಲ್ಲಿ ನೇಮಕಾತಿಗಳು ಆಸಿಂಧುವಾಗುತ್ತವೆ. |

| | | |
|---|---|---|
| | ಮುಂದುವರೆಸಬೇಕೆ<br>3) ಒಂದಕ್ಕಿಂತ ಹೆಚ್ಚು ನಳನೀರು ಇರುವ ಪಂಚಾಯತಿಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೀರುಗಂಟಿಗಳಿಗೆ ವಿದ್ಯಾರ್ಹತೆ ಇಲ್ಲದೇ ಇದ್ದು, ಇತರೆ ವರ್ಗದ ಒಬ್ಬ ನೀರುಗಂಟಿಗೆ ವಿದ್ಯಾರ್ಹತೆ ಇದ್ದಲ್ಲಿ ಮೀಸಲಾತಿಯಂತೆ ಮೊದಲನೇ ಹುದ್ದೆಯು ಪರಿಶಿಷ್ಟ ಜಾತಿಗೂ 2ನೇ ಹುದ್ದೆಯು ಸಾಮಾನ್ಯ ಹಾಗೂ 3ನೇ ಹುದ್ದೆಯು ಪರಿಶಿಷ್ಟ ಪಂಗಡಕ್ಕೆ ಮೀಸಲಾಗಿದ್ದು, ಪರಿಶಿಷ್ಟ ಜಾತಿ ಮತ್ತು ಪಂಗಡದವರು ವಿದ್ಯಾರ್ಹತೆ ಇಲ್ಲದೆ ಅನುಮೋದನೆಗೆ ಅವಕಾಶವಿಲ್ಲದೇ ಇದ್ದು, 2ನೇ ಬಿಂದುವಿಗೆ ನೇರವಾಗಿ ಅರ್ಹ (ಸಾಮಾನ್ಯ) ಇತರೆ ಅಭ್ಯರ್ಥಿಯನ್ನು ಅನುಮೋದಿಸಬಹುದೆ.<br>4) ಶಿವಮೊಗ್ಗ ಜಿಲ್ಲೆಯ ಸಾಗರ, ತೀರ್ಥಹಳ್ಳಿ, ಹೊಸನಗರ ಭಾಗಗಳಲ್ಲಿ ಪರಿಶೀಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಲ್ಲದೆ ಎಲ್ಲಾ ನೀರುಗಂಟಿ ಹುದ್ದೆಗಳಿಗೆ ಸಾಮಾನ್ಯ ವರ್ಗ ಹಾಗೂ ಹಿಂದುಳಿದ ವರ್ಗಗಳ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಂಡಿದ್ದು, ಅವರುಗಳಲ್ಲಿ ಕೆಲವರು ಎಸ್.ಎಸ್.ಎಲ್.ಸಿ. ವಿದ್ಯಾರ್ಹತೆ ಹೊಂದಿದ್ದು, ಅವರುಗಳ ಹುದ್ದೆಗೆ ಮೀಸಲಾತಿ ನಿಯಮದಂತೆ ಅನುಮೋದನೆ ನೀಡಲು ಸಾಧ್ಯವಾಗುತ್ತಿಲ್ಲ. ಕಾರಣ ಗ್ರಾಮ ಪಂಚಾಯತಿಯನ್ನು ಒಂದು ಘಟಕವಾಗಿ ಪರಿಗಣಿಸಿ ಮೀಸಲಾತಿ ನಿಗಧಿಗೊಳಿಸಬೇಕಾಗಿರುವುದರಿಂದ ಸಾಮಾನ್ಯ ಮತ್ತು ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಅನುಮೋದನೆ ನೀಡಿದ್ದಲ್ಲಿ ಮೀಸಲಾತಿ ನಿಯಮ ಉಲ್ಲಂಘನೆಯಾಗುತ್ತದೆ. ಇಂತಹ ಸಂದರ್ಭದಲ್ಲಿ ಅರ್ಹ ಸಾಮಾನ್ಯ ಮತ್ತು ಹಿಂದುಳಿದ ವರ್ಗದ ನೌಕರರಿಗೆ ಯಾವ ರೀತಿ ಅನುಮೋದನೆ ನೀಡಬೇಕು. | ನಿಗಧಿಗೊಳಿಸಿರುವ ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br><br>ಆಯಾಯ ಆದೇಶಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ ಆ ಸಂದರ್ಭದಲ್ಲಿ ನೇಮಿಸಿಕೊಂಡ ನೌಕರರಿಗೆ ಮಾತ್ರ ಅನ್ವಯಿಸುತ್ತದೆ.<br><br>ಗ್ರಾಮ ಪಂಚಾಯತಿಯನ್ನು ಒಂದು ಘಟಕವೆಂದು ಪರಿಗಣಿಸಿದ್ದರೂ ಸಹ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಒಂದೊಂದೇ ಹುದ್ದೆಗಳು ಇರುವ ಹುದ್ದೆಗಳಿಗೆ ಮೀಸಲಾತಿ ನಿಯಮದನ್ವಯ ನೇಮಕಾತಿ ವೃಂದದಲ್ಲಿ ಒಂದೇ ಹುದ್ದೆ ಇದ್ದಲ್ಲಿ, ಮೀಸಲಾತಿಯ ಆವರ್ತಬಿಂದು (ರೋಸ್ಟರ್ ಪಾಯಿಂಟ್) ಅನ್ವಯಿಸುವುದಿಲ್ಲ. |
| 03 | ಕರ್ಕ ಕಂ ಡಾಟ ಎಂಟ್ರಿ ಆಪರೇಟರ್ (ಮರು ಪದನಾಮಕರಣ ಮಾಡಿರುವಂತೆ ) ಹುದ್ದೆಗೆ ಗ್ರಾಮ ಪಂಚಾಯತಿಯಿಂದ ಈಗಾಗಲೆ ಸಲ್ಲಿಸಿದ ಪ್ರಾಸ್ತವನೆಗಳಿಗೆ ಅನುಮೋದನೆ ನೀಡುವ ಬಗ್ಗೆ<br><br>1) ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ನೀರುಗಂಟಿ/ ಕಛೇರಿ ಸಹಾಯಕರು/ಜವಾನ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರು ಎಸ್.ಎಸ್.ಎಲ್.ಸಿ. ಪಾಸಾದ ನಂತರ ಠರಾವು ಮೂಲಕ ಪಂಚಾಯತಿಯಲ್ಲಿ ಅವರುಗಳನ್ನು ಕ್ಲಾರ್ಕ್ –ಕಂ –ಕಂಪ್ಯೂಟರ್ ಆಪರೇಟರ್ ಎಂದು ನೇಮಕಾತಿ ಮಾಡಿಕೊಂಡಿದ್ದು, ಅವರುಗಳಿಗೆ ಪಿ.ಯು.ಸಿ. ಮತ್ತು ಕಂಪ್ಯೂಟರ್ ಪ್ರಮಾಣ ಪತ್ರ ಇರುವುದಿಲ್ಲ. ಆದರೆ ಹಲವಾರು ವರ್ಷಗಳಿಂದ ಕ್ಲಾರ್ಕ್ –ಕಂ –ಕಂಪ್ಯೂಟರ್ ಆಪರೇಟರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದು, ಅವರುಗಳನ್ನು ಸದರಿ ಹುದ್ದೆಗಳಿಗೆ ಅನುಮೋದಿಸಬೇಕೆ/ಮುಂದುವರಿಸಬೇಕೆ ಅಥವಾ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಪಿ.ಯು.ಸಿ ಮತ್ತು ಕಂಪ್ಯೂಟರ್ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳನ್ನು ಪತ್ರಿಕಾ ಪ್ರಕಟಣೆ ಮೂಲಕ ಆಯ್ಕೆ ಮಾಡಿಕೊಳ್ಳಬೇಕೆ.<br>2) ಗ್ರಾಮ ಪಂಚಾಯತಿಗಳಲ್ಲಿ ರೋಜ್ಗಾರ್ ಸಹಾಯಕರು ಹಾಗೂ ಕಂಪ್ಯೂಟರ್ ಆಪರೇಟರ್ಸ್ ಎಂದು ನೇಮಕಾತಿ ಮಾಡಿಕೊಂಡಿದ್ದು, ಇವರುಗಳಿಗೆ ಎಂ.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ (ಹೊರಗುತ್ತಿಗೆ ಮೇಲೆ ನೇಮಕಾತಿ ಮಾಡಿಕೊಂಡವರು) ಶೇ.6ರ ಆಡಳಿತ ವೆಚ್ಚದಲ್ಲಿ ಪಾವತಿ ಮಾಡುತ್ತಿದ್ದು, ಕಂಪ್ಯೂಟರ್ ಆಪರೇಟರ್‌ಗಳಿಗೆ (ಗ್ರಾಮ ಪಂಚಾಯತಿ ಠರಾವು ಮೂಲಕ ನೇಮಕಾತಿ ಮಾಡಿಕೊಂಡವರು) ಗ್ರಾಮ ಪಂಚಾಯತಿಯ ಶೇ.40ರ ಅನುದಾನದಲ್ಲಿ ಪಾವತಿ ಮಾಡುತ್ತಿದ್ದು, ಈ ರೀತಿ ನೇಮಕಗೊಂಡಿರುವ ಹೊರಗುತ್ತಿಗೆ ಹಾಗು ಗ್ರಾ.ಪಂ. ಠರಾವು ಮೂಲಕ ನೇಮಕ ಮಾಡಿಕೊಂಡಿರುವವರು ಸ್ಥಳೀಯ ಕಂಪ್ಯೂಟರ್ ತರಬೇತಿ ಸಂಸ್ಥೆಗಳಿಂದ ಪ್ರಮಾಣ ಪತ್ರಗಳನ್ನು ಪಡೆದುಕೊಂಡಿದ್ದು, ಸರ್ಕಾರದಿಂದ ಮಾನ್ಯತೆ ಪಡೆದ ಸಂಸ್ಥೆಗಳಿಂದ ಪ್ರಮಾಣ ಪತ್ರ ಹೊಂದಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಅವರ ಹುದ್ದೆಗಳಿಗೆ ಯಾವ ರೀತಿ ಅನುಮೋದನೆ ನೀಡಬೇಕು ಸ್ಥಳೀಯ ಸಂಸ್ಥೆಗಳು ನೀಡುವ ಪ್ರಮಾಣ ಪತ್ರಗಳನ್ನು ಒಪ್ಪಿಕೊಳ್ಳಬೇಕೆ ಅಥವಾ ಬೇಡವೇ. ಒಂದು ಪಕ್ಷ ಒಪ್ಪಿಕೊಳ್ಳಬೇಕೆಂದಾದಲ್ಲಿ ಅಂತಹ ಪ್ರಮಾಣ ಪತ್ರಗಳ ನೈಜ್ಯತೆ ಮತ್ತು ಅವರು ನೀಡಿರುವ ತರಬೇತಿಯ ಗುಣಮಟ್ಟ ಯಾವ ರೀತಿ ಪರಿಶೀಲಿಸಿಕೊಳ್ಳಬೇಕು. | ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಹುದ್ದೆ ಮಂಜೂರಾಗಿರುವುದಿಲ್ಲ. ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದ ದಿನಾಂಕ: 10-01-1994 ರ ಆದೇಶದಲ್ಲಿ ಕ್ಲರ್ಕ್ / ಅಕೌಂಟೆಂಟ್ ಕಂ ಬೆರಳಚ್ಚುಗಾರ ಹುದ್ದೆ ಮತ್ತು 04-01-2008 ರ ಅಧಿಕೃತ ಜ್ಞಾಪನದಲ್ಲಿ ಕ್ಲರ್ಕ್ ಹುದ್ದೆ ಮಂಜೂರಾಗಿರುತ್ತದೆ. ದಿನಾಂಕ:10-09-2014 ರ ಆದೇಶದಲ್ಲಿ ಕ್ಲರ್ಕ್ ಹುದ್ದೆಯನ್ನು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆಯೆಂದು ಮರು ಪದನಾಮಕರಣ ಮಾಡಲಾಗಿದೆ. ಈ ಹುದ್ದೆಯು ಭವಿಷ್ಯಾನ್ವಯವಾಗಿ ಜಾರಿಗೆ ಬಂದಿರುತ್ತದೆ.<br><br>ಆದಾಗ್ಯೂ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಎಂದು ಗ್ರಾಮ ಪಂಚಾಯತಿಗಳು ನೇಮಕಮಾಡಿಕೊಂಡಿದ್ದರೆ ಕ್ಲರ್ಕ್ ಕಂ ಕಂಪ್ಯೂಟರ್ ಆಪರೇಟರ್ ಹುದ್ದೆಗೆ ಅನುಮೋದನೆ ನೀಡುವ ಬದಲು ಸದರಿ ಆದೇಶಗಳಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆಯ ಅನುಸಾರ ಕ್ಲರ್ಕ್ ಹುದ್ದೆಗೆ ನೇಮಕಗೊಂಡಿದ್ದರೆ ಕಂಪ್ಯೂಟರ್ ಆಪರೇಟರ್ ಎಂಬುವುದನ್ನು ಹೊರತುಪಡಿಸಿ, ಕ್ಲರ್ಕ್ ಹುದ್ದೆಗೆ ನೇಮಕಾತಿ ಮಾಡಿಕೊಂಡಿರುವುದಕ್ಕೆ ಅನುಮೋದನೆ ನೀಡಬಹುದಾಗಿರುತ್ತದೆ.<br><br>ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ಕಂಪ್ಯೂಟರ್ ಆಪರೇಟರ್ ಹುದ್ದೆ ಮಂಜೂರಾಗದೆ ದಿನಾಂಕ: 10-09-2014 ರ ಪೂರ್ವದಲ್ಲಿ ಗ್ರಾಮ ಪಂಚಾಯತಿಗಳು ಡಾಟಾ ಎಂಟ್ರಿ ಆಪರೇಟರ್ / ಕಂಪ್ಯೂಟರ್ ಆಪರೇಟರ್ ಹುದ್ದೆಗೆ ನಿರ್ಣಯದ ಮೂಲಕ ನೇಮಕಾತಿ ಮಾಡಿಕೊಂಡಿದ್ದಲ್ಲಿ ನೇಮಕಾತಿಗಳು ಆಸಿಂಧುವಾಗುತ್ತವೆ.<br><br>ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವವರಿಗೆ ಮೊದಲ ಆದ್ಯತೆ ನೀಡಿ ಗ್ರಾಮ ಪಂಚಾಯತಿಗಳಲ್ಲಿ ಗುಮಾಸ್ತ / ಬೆರಳಚ್ಚುಗಾರ (ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮರು ಪದನಾಮೀಕರಣ) ಹುದ್ದೆ ಖಾಲಿ |

| | | |
|---|---|---|
| | | ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವವರಿಗೆ ಮೊದಲ ಆದ್ಯತೆ ನೀಡಿ ಗ್ರಾಮ ಪಂಚಾಯತಿಗಳಲ್ಲಿ ಗುಮಾಸ್ತ / ಬೆರಳಚ್ಚುಗಾರ (ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮರು ಪದನಾಮೀಕರಣ) ಹುದ್ದೆ ಖಾಲಿ ಇದ್ದಲ್ಲಿ ಗ್ರಾಮ ಪಂಚಾಯತಿ ಸಾಮಾನ್ಯ ಸಭೆ ನಿರ್ಣಯದ ಮೇರೆಗೆ ನೇಮಿಸಿಕೊಳ್ಳಬಹುದಾಗಿದೆ. |
| 08 | ಕೆಲವು ಹೋಬಳಿ ಮಟ್ಟದ ಹಾಗೂ ನಗರ ಪ್ರದೇಶಗಳಿಗೆ ಹೊಂದಿಕೊಂಡಂತೆ ಇರುವ ಗ್ರಾಮ ಪಂಚಾಯತಿಗಳಲ್ಲಿ ಕಸವಿಲೇವಾರಿ ಮತ್ತು ನೈರ್ಮಲ್ಯಕ್ಕಾಗಿ ಒಂದಕ್ಕಿಂತ ಹೆಚ್ಚಿಗೆ ಸ್ವೀಪರ್‌ಗಳನ್ನು ನೇಮಿಸಿಕೊಂಡಿದ್ದು, ಅಂತಹ ಗ್ರಾಮ ಪಂಚಾಯತಿಗಳಲ್ಲಿ ಕೇವಲ ಒಬ್ಬ ಸ್ವೀಪರ್‌ಗೆ ಮಾತ್ರ ಅನುಮೋದನೆ ನೀಡಿದಲ್ಲಿ ಸದರಿ ಗ್ರಾಮ ಪಂಚಾಯತಿಗಳ ಕಸವಿಲೇವಾರಿ ಮತ್ತು ನೈರ್ಮಲ್ಯಕ್ಕೆ ಅಡಚಣೆಯಾಗು ವುದರಿಂದ ಅಗತ್ಯಕ್ಕೆ ತಕ್ಕಂತೆ ಶೇ.40ರ ವೆಚ್ಚದ ಮಿತಿಯೊಳಗೆ ಸ್ವೀಪರ್‌ಗಳ ನೇಮಕಕ್ಕೆ ಅನುಮೋದನೆ ನೀಡುವ ಬಗ್ಗೆ | ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ಒಂದು ಸ್ವಚ್ಛತಾಗಾರರ ಹುದ್ದೆಯು ಮಂಜೂರಾಗಿದ್ದು, ಮಂಜೂರಾದ ಹುದ್ದೆಗೆ ನೇಮಿಸಿಕೊಂಡಿರುವ ನೌಕರರನ್ನು ಮಾತ್ರ ಅನುಮೋದಿಸಬಹುದಾಗಿರುತ್ತದೆ. ಹೆಚ್ಚುವರಿಯಾಗಿ ನೇಮಿಸಿಕೊಂಡಿರುವ ನೌಕರರನ್ನು ಅನುಮೋದಿಸಲು ಅವಕಾಶವಿಲ್ಲ. |
| 09 | ವಿಶ್ವ ಬ್ಯಾಂಕ್ ನೆರವಿನ ಕುಡಿಯುವ ನೀರು ಯೋಜನೆಯಡಿಯ ಗ್ರಾಮ ಪಂಚಾಯತಿ ನೀರು ಸರಬರಾಜು ಮತ್ತು ನೈರ್ಮಲ್ಯ ಸಮಿತಿಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೀರಿನ ಕರ ವಸೂಲಿಗಾರರು ಹಾಗೂ ನೀರುಗಂಟಿಗಳ ಸೇವೆಯನ್ನು ಕೆಲವು ಗ್ರಾಮ ಪಂಚಾಯತಿಗೆ ಹಸ್ತಾಂತರ ಮಾಡಿಕೊಂಡು ಮುಂದುವರಿಸಿರುತ್ತಾರೆ. ಹಾಗೂ ಕೆಲವು ಗ್ರಾಮ ಪಂಚಾಯತಿಗಳಲ್ಲಿ ಸದರಿ ನೌಕರರುಗಳನ್ನು ನೈರ್ಮಲ್ಯ ಸಮಿತಿಯಡಿಯಲ್ಲಿಯೇ ಮುಂದುವರಿಸಿರುತ್ತಾರೆ. ಸದರಿ ನೌಕರರನ್ನು ಗ ್ರಾಮ ಪಂಚಾಯತಿ ಸಿಬ್ಬಂದಿ ಎಂದು ಪರಿಗಣಿಸಿ ಅನುಮೋದನೆ ನೀಡುವ ಬಗ್ಗೆ | ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113 ಕ್ಕೆ ಒಳಪಟ್ಟು ಗ್ರಾಮ ಪಂಚಾಯತಿಗಳು ನಿರ್ಣಯದ ಮೂಲಕ ನೇಮಿಸಿಕೊಂಡಿರುವ ವಾಟರ್‌ಮೆನ್‌ಗಳು ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳಾಗಿದ್ದು, ಆ ನೌಕರರುಗಳಿಗೆ ಅನುಮೋದನೆ ನೀಡಬಹುದಾಗಿದೆ. |
| 10 | ಈ ರೀತಿ ಅನುಮೋದನೆ ನೀಡಿದ ನಂತರ ದಿನಾಂಕ:10-09-2014ರ ಆದೇಶದ ಪ್ಯಾರಾ -7 ರ (1)ರಲ್ಲಿ ವಿವರಿಸಿರುವಂತೆ ಕರ ವಸೂಲಿಗಾರರ ವೃಂದಕ್ಕೆ ಮುಂಬಡ್ತಿಯ ಮೂಲಕ ಅರ್ಹ ಗ್ರಾಮ ಪಂಚಾಯತಿ ಸಿಬ್ಬಂದಿಗಳನ್ನು ನೇಮಿಸುವ ಸಂಬಂಧ ನೀರಿನ ಕರವಸೂಲಿಗಾರರಿಗೆ ಮುಂಬಡ್ತಿ ನೀಡಲು ಸೂಚಿಸಲಾಗಿದ್ದು, ವಿಶ್ವ ಬ್ಯಾಂಕ್ ಯೋಜನೆಯಡಿ ಕುಡಿಯುವ ನೀರು ಯೋಜನೆಯಡಿ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೀರಿನ ಕರ ವಸೂಲಿಗಾರರಿಗೆ ಪುನಃ ಕರ ವಸೂಲಿಗಾರರ ಹುದ್ದೆಗೆ ಮುಂಬಡ್ತಿ ನೀಡಬೇಕೆ ಎಂಬ ಬಗ್ಗೆ ನಿರ್ದೇಶನ | ದಿನಾಂಕ:10-09-2014 ರ ಆದೇಶದಂತೆ ವಾಟರ್‌ಮೆನ್ ಹುದ್ದೆಯಿಂದ ಕರವಸೂಲಿಗಾರರ ಹುದ್ದೆಗೆ ಮುಂಬಡ್ತಿ ನೀಡಲು ಗ್ರಾಮ ಪಂಚಾಯತಿಗಳು ನಿಯಮಾನುಸಾರ ಕ್ರಮ ವಹಿಸಬೇಕಾಗಿರುತ್ತದೆ. |
| 11 | ದಿನಾಂಕ:10-09-2014ರ ಸರ್ಕಾರದ ಸುತ್ತೋಲೆಯ ಪ್ಯಾರಾ 10ರ 2ನೇ ಪ್ಯಾರದಲ್ಲಿ ವಿವರಿಸಿರುವಂತೆ ದಿನಾಂಕ:04-01-2008ರ ಅಧಿಕೃತ ಜ್ಞಾಪನದಂತೆ ಗ್ರಾಮ ಪಂಚಾಯತಿಯಡಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳ ನೀರಿನ ಸ್ಥಾವರಗಳನ್ನು ಹೊಂದಿದ್ದರೆ ಅದರ ಅಗತ್ಯಕ್ಕೆ ತಕ್ಕಂತೆ ಪ್ರತಿ ನೀರು ಸರಬರಾಜು ಸ್ಥಾವರಕ್ಕೆ ಒಬ್ಬ ವಾಟರ್‌ಮನ್/ಪಂಪ್ ಮೆಕ್ಯಾನಿಕ್ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದು, ಕಿರು ನೀರು ಸರಬರಾಜು ವ್ಯವಸ್ಥೆಗೆ ಪ್ರತ್ಯೇಕ ವಾಟರ್‌ಮೆನ್ ತೆಗೆದುಕೊಂಡಿರುವುದಕ್ಕೆ ಅನುಮೋದನೆ ನೀಡುವ ಬಗ್ಗೆ. | ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 4.01.2008ರಲ್ಲಿ, ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳ ನೀರಿನ ಸ್ಥಾವರಗಳನ್ನು ಹೊಂದಿದ್ದರೆ ಅಗತ್ಯಕ್ಕೆ ತಕ್ಕಂತೆ ವಾಟರ್‌ಮನ್‌ಗಳನ್ನು ನೇಮಿಸಿಕೊಳ್ಳಲು ಅವಕಾಶವಿರುತ್ತದೆ (ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 22 ಗ್ರಾಪಂಸಿ 2014ರ ಕಂಡಿಕೆ 10). |
| | ಸರ್ಕಾರದ ತಿದ್ದೋಲೆಯಲ್ಲಿ ನೇಮಕಾತಿ ನಿಯಮಾನುಸಾರವಾಗಿರುವುದೆಂಬ ಪದವನ್ನು ಕೈ ಬಿಡತಕ್ಕದೆಂದು ತಿಳಿಸಲಾಗಿದೆ. ಆದರೆ ಅರ್ಹತೆಯೆಂಬ ಪದದ ಮುಂದೆ ಸರ್ಕಾರದ ಆದೇಶ ದಿನಾಂಕ:10-09-2014 ರ ಕಂಡಿಕೆ 10 ರಲ್ಲಿ ತಿಳಿಸಿರುವಂತೆ ಅರ್ಹತೆ ಮತ್ತು ಮೀಸಲಾತಿ | ಗ್ರಾಮ ಪಂಚಾಯತಿಯನ್ನು ಒಂದು ಘಟಕವೆಂದು ಪರಿಗಣಿಸಿದ್ದರೂ ಸಹ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಒಂದೊಂದೇ ಹುದ್ದೆಗಳು ಇರುವ ಹುದ್ದೆಗಳಿಗೆ ಮೀಸಲಾತಿ ನಿಯಮದನ್ವಯ ನೇಮಕಾತಿ ವೃಂದದಲ್ಲಿ ಒಂದೇ ಹುದ್ದೆ ಇದ್ದಲ್ಲಿ, |

| | | |
|---|---|---|
| | ಅನ್ವಯವಾಗುವ ಪ್ರಕರಣಗಳಲ್ಲಿ ಅದರ ಪಾಲನೆ ಎಂಬ ಪದವನ್ನು ನೀಡಿದ್ದು, ಆದರೆ ನೇಮಕಾತಿ ನಿಯಮಾನುಸಾರವೆಂಬ ಕೈಬಿಡುವ ಪದದಲ್ಲಿ ಮೀಸಲಾತಿಯು ಸಹ ಒಳಗೊಂಡಿದ್ದಲ್ಲಿ, ಮೀಸಲಾತಿ ಅನುಸರಿಸಿದ್ದನ್ನು ಕೈಬಿಡಬೇಕೆ ಅಥವಾ ಬೇಡವೇ? | ಮೀಸಲಾತಿಯ ಆವರ್ತಬಿಂದು (ರೋಸ್ಟರ್ ಪಾಯಿಂಟ್) ಅನ್ವಯಿಸುವುದಿಲ್ಲ. |
| 12 | ಗ್ರಾಮ ಪಂಚಾಯತ್ ಸಿಬ್ಬಂದಿಗಳ (05) ವರ್ಗದ ಹುದ್ದೆಗಳಲ್ಲಿ ಈಗಾಗಲೇ ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ಆದಾಯವು ಹೆಚ್ಚಿಗೆ ಇರುವುದನ್ನು ಪರಿಗಣಿಸಿಕೊಂಡು ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಗ್ರಾಮ ಪಂಚಾಯತಿಯು ನೇಮಕ ಮಾಡಿಕೊಂಡಿರುತ್ತಾರೆ. ಇಂತಹ ನೇಮಕ ಮಾಡಿಕೊಂಡ ಹುದ್ದೆಗಳಲ್ಲಿ ಅನುಮೋದನೆಗೆ ಹಿರಿಯನಾದವನು ಒಂದು ವೇಳೆ ಅನರ್ಹನಾಗಿದ್ದಲ್ಲಿ ಅದೇ ಹುದ್ದೆಗೆ ನೇಮಕ ಮಾಡಿಕೊಂಡ ಇನ್ನೊಬ್ಬ ವ್ಯಕ್ತಿಯು ಅರ್ಹನಿದ್ದಲ್ಲಿ ಅಂತಹ ವ್ಯಕ್ತಿಯನ್ನು ಅನುಮೋದನೆಗೆ ಪರಿಗಣಿಸಲು ಬರುತ್ತದೆಯೇ? | ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದಲ್ಲಿ ನಿಗದಿಪಡಿಸಿರುವ ಹುದ್ದೆಗಳಿಗನುಗುಣವಾಗಿ ಮತ್ತು ಆದೇಶಗಳಲ್ಲಿನ ಷರತ್ತುಗಳಿಗನುಗುಣವಾಗಿ ಗ್ರಾಮ ಪಂಚಾಯಿತಿಗಳು ನೇಮಕಾತಿ ಮಾಡಿಕೊಳ್ಳಬೇಕಾಗುತ್ತದೆ.<br>ಕೆಲವೊಂದು ಗ್ರಾಮ ಪಂಚಾಯತಿಗಳಲ್ಲಿ ಆದಾಯವು ಹೆಚ್ಚಿಗೆ ಇರುವುದನ್ನು ಪರಿಗಣಿಸಿಕೊಂಡು ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ಗ್ರಾಮ ಪಂಚಾಯತಿಯು ನೇಮಕ ಮಾಡಿಕೊಂಡಿದ್ದಲ್ಲಿ ಇಂತಹ ನೇಮಕ ಮಾಡಿಕೊಂಡ ಹುದ್ದೆಗಳಲ್ಲಿ ಅನುಮೋದನೆಗೆ ಹಿರಿಯನಾದವನು ಒಂದು ವೇಳೆ ಅನರ್ಹನಾಗಿದ್ದಲ್ಲಿ, ಅನರ್ಹತೆಗೆ ಕಾರಣಗಳನ್ನು ಲಿಖಿತ ವಾಗಿ ದಾಖಲಿಸಬೇಕು. ಅದೇ ಹುದ್ದೆಗೆ ನೇಮಕ ಮಾಡಿಕೊಂಡ ಇನ್ನೊಬ್ಬ ವ್ಯಕ್ತಿಯು ಅರ್ಹನಿದ್ದಲ್ಲಿ ಅಂತಹ ವ್ಯಕ್ತಿಯನ್ನು ಅನುಮೋದನೆಗೆ ಪರಿಗಣಿಸಬಹುದು. |
| 13 | ಸರ್ಕಾರದ ಆದೇಶ ಮತ್ತು ಮಾರ್ಗಸೂಚಿಗಳನುಸಾರ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಅನುಮೋದನೆ ಪಟ್ಟಿಯನ್ನು ತಯಾರಿಸಿದ ನಂತರ ಈ ಪಟ್ಟಿಗೆ 15 ದಿನಗಳ ಕಾಲಾವಕಾಶ ನೀಡಿ ಸಂಬಂಧಪಟ್ಟ ಸಿಬ್ಬಂದಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಲು ಅವಕಾಶವಿದೆಯೇ? | ಅವಕಾಶವಿರುವುದಿಲ್ಲ. |
| 14 | ಮಂಡಲ ಪಂಚಾಯತಿಗಳು ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಅನುಮೋದನೆ ನೀಡುವ ಬಗ್ಗೆ. | ಸರ್ಕಾರದ ಆದೇಶ ದಿನಾಂಕ:10-01-1994 ರಲ್ಲಿ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಿಂದಿನ ಮಂಡಲ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ / ಅಧಿಕವಾಗಿರುವ ನೌಕರರನ್ನು ಹೊಸದಾಗಿ ರಚಿತವಾಗಿರುವ ಗ್ರಾಮ ಪಂಚಾಯತಿಗಳಿಗೆ ಮರು ಹೊಂದಾಣಿಕೆ ಮೂಲಕ ನೇಮಿಸಿರುವ ಆದೇಶದ ಪ್ರತಿ ಇದ್ದರೆ ಸಾಕು. ಮಂಡಲ ಪಂಚಾಯತಿ ನೌಕರರಿಗೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡುವ ಅವಶ್ಯಕತೆ ಇರುವುದಿಲ್ಲ. |

ತಮ್ಮ ವಿಶ್ವಾಸಿ

(ಕೆ. ಯಾಲಕ್ಕಿಗೌಡ) 17/11/14

ನಿರ್ದೇಶಕರು (ಪಂ.ರಾಜ್) ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,

ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.